# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 969 |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್,<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 20-08-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೊಪ್ಪಳ ನಗರ ಗಂಗಾವತಿ ರಸ್ತೆ ಕಿಮ್ಸ್ ಕಾಲೇಜ್ ಹತ್ತಿರ ರೈಲ್ವೆ ಲೆವಲ್ ಕ್ರಾಸಿಂಗ್ ಗೇಟ್ ಇರುವುದರಿಂದ ತುರ್ತು ಪರಿಸ್ಥಿತಿಯಲ್ಲಿ ಆಂಬುಲೆನ್ಸ್‌ಗಳ ಓಡಾಟಕ್ಕೆ ಗೇಟ್ ಆಚೆ ಇರುವ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಸಾರ್ವಜನಿಕ ಮತ್ತು ಸರ್ಕಾರಿ ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿರುವುದು. ಸರ್ಕಾರದ ಗಮನಕ್ಕೆ ಇದೆಯೇ ಇದ್ದಲ್ಲಿ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು) | ಕೊಪ್ಪಳ ನಗರ ಗಂಗಾವತಿ ರಸ್ತೆಯ ಕಿಮ್ಸ್ ಕಾಲೇಜ್ ಹತ್ತಿರ ರೈಲ್ವೆ ಲೆವೆಲ್ ಕ್ರಾಸಿಂಗ್ (ಎಲ್.ಸಿ-68) ರಾಜ್ಯ ಹೆದ್ದಾರಿ ಕಲಮಲಾ-ಶಿಗ್ಗಾಂವ ರಸ್ತೆಯ ಮೇಲೆ ಬರುತ್ತಿದ್ದು, ಸದರಿ ಲೆವೆಲ್ ಕ್ರಾಸಿಂಗ್ ಬದಲಿಗೆ ROB ನಿರ್ಮಾಣ ಮಾಡಲು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯವು ಕೇಂದ್ರ ರಸ್ತೆ ಮೂಲಸೌಕರ್ಯ ನಿಧಿ (CRIF) ಯೋಜನೆಯ ಸೇತು-ಬಂಧನ ಕಾರ್ಯಕ್ರಮದಡಿ ಈ ಮೇಲ್ಸೇತುವೆ ಕೈಗೊಳ್ಳಲು ದಿನಾಂಕ: 25.05.2023 ರಲ್ಲಿ ಅನುಮೋದನೆ ನೀಡಿರುತ್ತದೆ.<br><br>CRIF ಸೇತು ಬಂಧನ ಯೋಜನೆಯಡಿ ಅನುಮೋದನೆ ನೀಡಲಾಗಿರುವ ಕಾಮಗಾರಿಗಳ ಮೊತ್ತವು Bank of Sanction ಮೊತ್ತವನ್ನು ಮೀರಿರುವುದರಿಂದ ಸದರಿ ಪ್ರಸ್ತಾಪಿತ ROB ನಿಯನ್ನು ಹಾಲಿ ಕೈಗೆತ್ತಿಕೊಂಡಿರುವುದಿಲ್ಲ. |
| ಆ) | ಕೊಪ್ಪಳ ನಗರದ ಕಿಮ್ಸ್ ಮೆಡಿಕಲ್ ಕಾಲೇಜು ಹತ್ತಿರ ಇರುವ ರೈಲ್ವೆ ಲೆವಲ್ ಕ್ರಾಸಿಂಗ್‌ಗೆ ಮೇಲ್ ಸೇತುವೆ ಅಥವಾ ಕೆಳ ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಇದೆಯೇ? ಇದ್ದಲ್ಲಿ ಪ್ರಸ್ತುತ ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ. (ವಿವರ ಒದಗಿಸುವುದು) | |
| ಇ) | ಇಲ್ಲದೇ ಇದ್ದಲ್ಲಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಸದರಿ ಲೆವಲ್ ಕ್ರಾಸಿಂಗ್ ಗೇಟ್ ಹತ್ತಿರ ರಸ್ತೆ ಮೇಲ್ಸೇತುವೆ ಅಥವಾ ಕೆಳ ಸೇತುವೆ ನಿರ್ಮಾಣ ಮಾಡಲು ಸರ್ಕಾರವು ಉದ್ದೇಶಿಸಿದೆಯೇ? (ವಿವರ ಒದಗಿಸುವುದು) | |
| ಈ) | ಉದ್ದೇಶಿಸಿದ್ದಲ್ಲಿ ಎಷ್ಟು ಕಾಲಾವಧಿ ಒಳಗಾಗಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು (ಮಾಹಿತಿ ಒದಗಿಸುವುದು) | |

ಸಂಖ್ಯೆ: ಲೋಇ 102 ಸಿಐಎಸ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು